




“ನನಗೆ ಏನು ಮಾಡುವುದೆಂದೇ ತೋಚುತ್ತಿಲ್ಲ ಆಲ್ಬರ್ಟ್. ನನ್ನ ತಲೆ ಕೆಟ್ಟು ಗೊಬ್ಬರವಾಗಿ ಬಿಟ್ಟಿದೆ!” ಮೇಬಲ್ ತಲೆಚಚ್ಚಿಕೊಳ್ಳುತ್ತಾ ಹೇಳಿದಳು. ಅವಳ ದೃಷ್ಟಿ ಮಡಿಲಿನಲ್ಲಿ ಹಾಯಾಗಿ ಮಲಗಿದ್ದ ಮಗುವಿನ ಮೇಲಿತ್ತು. “ಏನೋ ನನಗೆ ಸರಿ ಕಾಣುತ್ತಿಲ್ಲ...”

“ಮತ್ತೊಮ್ಮೆ ಪ್ರಯತ್ನ ಮಾಡಿ ನೋಡು ಮೇಬಲ್. ಬೇರೆ ದಾರಿಯೇ ಇಲ್ಲ!” ಅವನು ಹೇಳಿದ. ಅವಳು ಮತ್ತೊಮ್ಮೆ ಬಿಸಿ ನೀರಿನ ಪಾತ್ರೆಯಲ್ಲಿಟ್ಟಿದ್ದ ಹಾಲಿನ ಬಾಟಲಿಯನ್ನು ಹೊರಗೆ ತೆಗೆದು ಎರಡು ಮೂರು ತೊಟ್ಟು ಹಾಲನ್ನು ಅಂಗೈ ಮೇಲೆ ಚಿಮುಕಿಸಿ ಬಿಸಿಯನ್ನು ಪರೀಕ್ಷಿಸಿದಳು. ಸರಿಯಾಗಿದೆ ಎಂದು ಅನಿಸಿದಾಗ ಮೆಲ್ಲಗೆ ಬಾಟಲಿನ ನಿಪ್ಪಲನ್ನು ಮಗುವಿನ ಬಾಯಿಗೆ ಕೊಡುತ್ತಾ, “ಸ್ವಲ್ಪನಾದ್ರೂ ಕುಡಿ ಮಗಳೇ...” ಎಂದಳು ಗೋಗರೆಯುವ ದನಿಯಲ್ಲಿ. ಮೇಜಿನ ಮೇಲಿದ್ದ ದೀಪ ಮಗುವಿನ ಸುತ್ತ ಮೃದುವಾದ ಮಂದ ಬೆಳಕು ಚೆಲ್ಲಿತ್ತು.

“ಪ್ಲೀಜ್ ಮಗಳೇ... ಸ್ವಲ್ಪ...”

ಆಲ್ಬರ್ಟ್ ತಾನು ಓದುತ್ತಿದ್ದ ಪತ್ರಿಕೆಯಿಂದ ಮುಖವನ್ನೆತ್ತಿ ಅವಳನ್ನೇ ನೋಡುತ್ತಿದ್ದ. ಅವಳ ಸುಂದರವಾದ ಮುಖ ಆಯಾಸ ಮತ್ತು ಹತಾಶೆಯಿಂದ ಬಾಡಿ ಹೋಗಿತ್ತಾದರೂ ಮಗುವಿನ ಕಡೆಗೆ ಬಗ್ಗಿದ್ದ ಅವಳು ಆಕರ್ಷಕವಾಗಿ ಕಾಣುತ್ತಿದ್ದಳು.

“ನೋಡಿದೆಯಾ?... ಏನೂ ಪ್ರಯೋಜನವಿಲ್ಲ. ಅವಳು ಕುಡಿಯುತ್ತಲೇ ಇಲ್ಲ.” ಬಾಟಲನ್ನು ಬೆಳಕಿನೆಡೆಗೆ ಎತ್ತಿ ಅವಳು ಹೇಳಿದಳು. “ಒಂದು ತೊಟ್ಟೂ ಮುಟ್ಟಿಲ್ಲ! ನನಗ್ಯಾಕೋ ಹೆದರಿಕೆಯಾಗುತ್ತೆ ಆಲ್ಬರ್ಟ್.” ಅವಳು ಹೇಳಿದಳು.

“ನೀನು ಚಿಂತೆ ಮಾಡಬೇಡ ಮೇಬಲ್,